# ದೋನಿ ಬ್ರ್ಯಾಂಡ್!




**ನಾಯಕ ದೋನಿ ಭಾರತಕ್ಕೆ ಒಂದೊಂದೇ ವಿಜಯಗಳನ್ನು ತಂದುಕೊಟ್ಟಂತೆಯೇ ಆತನ ಮಾರುಕಟ್ಟೆ ಬ್ರ್ಯಾಂಡ್ ಮೌಲ್ಯ ಏರುತ್ತಲೇ ಹೋಯಿತು. ಈಗ ದೋನಿಯ ಬ್ರ್ಯಾಂಡ್ ಮೌಲ್ಯ 210 ಕೋಟಿ ರೂಪಾಯಿ!**

★ **ವಿಶಾಖ ಎನ್.**

ಅಧ್ಯಾಯ ಒಂದು: 1964. ಮಹೇಂದ್ರ ಸಿಂಗ್ ದೋನಿ ಅಪ್ಪ ರಾಂಚಿಗೆ ಬಂದರು. ಮೆಕಾನ್ ಲಿಮಿಟೆಡ್ ಕಂಪೆನಿಯ ಪಂಪ್ ಆಪರೇಟರ್ ಆಗಿದ್ದ ಅವರ ಮನೆಯ ಪಕ್ಕದಲ್ಲೇ ಒಂದು ಕ್ರೀಡಾಂಗಣವಿತ್ತು. 1981ರಲ್ಲಿ ದೋನಿ ಹೊಟ್ಟಿದ್ದು. ಮೊದಲು ಫುಟ್ಬಾಲ್ ಆಡುತ್ತಿದ್ದ ದೋನಿ, ಗೋಲ್‌ಕೀಪರ್ ಆಗಿ ತಡೆದ ಗೋಲ್‌ಗಳು ಕ್ರಿಕೆಟ್‌ನಲ್ಲಿ ವಿಕೆಟ್ ಕೀಪರ್ ಆಗುವ ಅವಕಾಶ ತಂದಿತ್ತಿತು.

ಅಧ್ಯಾಯ ಎರಡು: ಸೆಂಟ್ರಲ್ ಕೋಲ್ ಲಿಮಿಟೆಡ್ (ಸಿಸಿಎಲ್) ಎಂಬ ಕಂಪೆನಿಗೆ 1998ರ ಜನವರಿಯಲ್ಲಿ ದೇವಲ್ ಸಹಾಯ್ ಎಂಬ ನಿರ್ದೇಶಕರು ಬಂದರು. ಪಾಳುಬಿದ್ದಂತೆ ಇದ್ದ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡಿಸಿದರೆ ಹೇಗೆ ಎಂಬ ಯೋಚನೆ ಮೊಳೆಯಿತು. ಶಾಲಾ ಕ್ರಿಕೆಟ್‌ನಲ್ಲಿ ಆಗಷ್ಟೇ ಡಬಲ್ ಸೆಂಚುರಿ ಹೊಡೆದಿದ್ದ ಮಹೇಂದ್ರ ಸಿಂಗ್ ದೋನಿ ತರಹದ ಹುಡುಗರನ್ನು ಹುಡುಕಿಸಿ ತಂದರು. ದೋನಿಗೆ ಆಗ ಡಬ್ಬಲ್ ಸಂಬಳ; ಕ್ರಿಕೆಟ್ ಆಡಲು. ತಿಂಗಳಿಗೆ ನಾಲ್ಕು ಸಾವಿರ ರೂಪಾಯಿ!

ಅಧ್ಯಾಯ ಮೂರು: 2007ರಲ್ಲಿ ಭಾರತದ ಮುಂದಿನ ನಾಯಕ ಯಾರು ಎಂದು ದಿಲೀಪ್ ವೆಂಗ್‌ಸರ್ಕಾರ್ ನೇತೃತ್ವದ ಆಯ್ಕೆ ಸಮಿತಿ ತಲೆಕೆಡಿಸಿಕೊಳ್ಳುತ್ತಿತ್ತು. ರಾಹುಲ್ ದ್ರಾವಿಡ್ ಹಗುರಾಗ ಬಯಸಿದ್ದರು. ಅವರು ತಕ್ಷಣಕ್ಕೆ ಸೂಚಿಸಿದ ಹೆಸರು ದೋನಿಯದ್ದು. ಸಚಿನ್ ತೆಂಡೂಲ್ಕರ್ ಕೂಡ ಅದೇ ಹೆಸರನ್ನು ಅನುಮೋದಿಸಿದ್ದು. ದೋನಿ ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕರಾದರು. ಅಳುಕಿನಿಂದಲೇ ಹಿಂದಿ ಮಾತನಾಡುತ್ತಿದ್ದ ಅವರು, ನೋಡನೋಡುತ್ತಲೇ ಸುಲಿದ ಬಾಳೆಯ ಹಣ್ಣಿನಂದದಿ ಇಂಗ್ಲಿಷ್ ಮಾತನಾಡಲಾರಂಭಿಸಿದರು. 4000 ಸಾವಿರ ರೂಪಾಯಿ ಪಗಾರ ಕೋಟಿಗಟ್ಟಲೆ ಲೆಕ್ಕಾಚಾರಕ್ಕೆ ಬೆಳೆದಿತ್ತು.

–ಈ ಅಧ್ಯಾಯಗಳನ್ನೆಲ್ಲ ಒಂದು ಸೂತ್ರದಲ್ಲಿ ಕಟ್ಟಿಹಾಕಿದರೆ ದೋನಿಯ ಪರಿಶ್ರಮ, ಜನಪ್ರಿಯತೆ, ನಾಯಕತ್ವದ ನೊಗ ಹೊತ್ತ ರೀತಿ ಎಲ್ಲವುಗಳ ಸ್ಥೂಲ ಚಿತ್ರಣ ಸಿಕ್ಕೀತು.

ಶ್ರಮ, ಆತ್ಮವಿಶ್ವಾಸ, ಜನಪ್ರಿಯತೆಯನ್ನು ನಿಭಾಯಿಸುವ ಜಾಣ್ಮೆ ದೋನಿಯ ವಿಶೇಷತೆ. ಅವರು ಬ್ರ್ಯಾಂಡಿಂಗ್ ಅನ್ನೂ ತೂಗಿಸಿಕೊಂಡೇ ಬಂದವರು. ಭಾರತ 2011ರಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ವಿಶ್ವಕಪ್ ಗೆಲ್ಲುವ ಹೊತ್ತಿಗೆ ಬಾಲಿವುಡ್ ನಟ ಶಾರುಖ್ ಖಾನ್ ಕೈಯಲ್ಲಿ ಇದ್ದಷ್ಟೇ ಮೊತ್ತದ ಬ್ರಾಂಡ್‌ಗಳು ದೋನಿ ಕೈಯಲ್ಲಿದ್ದವು. ಅದರ ಗಣಿತ ಮುಖ್ಯವಲ್ಲ; ಭಾರತ ಅಂತರರಾಷ್ಟ್ರೀಯ ಕ್ರಿಕೆಟ್ ತಂಡದ ನಾಯಕನೊಬ್ಬ ಹೇಗೆ ಬಹು ಚಟುವಟಿಕೆಯನ್ನು ತೂಗಿಸಿಕೊಂಡು ಬಂದ ಎನ್ನುವ ದೃಷ್ಟಿಯಲ್ಲಿ ಈ ಪ್ರಕ್ರಿಯೆಯನ್ನು ನೋಡಬೇಕು.

‘ಬ್ರ್ಯಾಂಡ್ ಕೊಹ್ಲಿ ಓವರ್‌ಟೇಕ್ಸ್ ಬ್ರಾಂಡ್ ದೋನಿ’ ಎಂಬ ಒಂದು ಲೇಖನ ಇತ್ತೀಚೆಗೆ ವೆಬ್‌ಸೈಟ್ ಒಂದರಲ್ಲಿ ಪ್ರಕಟವಾಗಿತ್ತು. ಈಗೇನಿದ್ದರೂ ದಿನದ ಲೆಕ್ಕದಲ್ಲಿ ಸಂಭಾವನೆ ನೀಡಿ, ಲಾಭ ಮಾಡಿಕೊಳ್ಳುವುದು ಮಾರುಕಟ್ಟೆ ಲೆಕ್ಕಾಚಾರ ಎಂಬ ಅಂಶವನ್ನು ಕೇಂದ್ರವಾಗಿಟ್ಟುಕೊಂಡ ಲೇಖನ ಅದು. ಅದರ ಪ್ರಕಾರ ದಿನವೊಂದಕ್ಕೆ ಯಾವುದಾದರೂ ಬ್ರಾಂಡ್ಗೆ ಪ್ರಚಾರ ಕೊಡಲು ಕೊಹ್ಲಿ ಪಡೆಯುವ ಸಂಭಾವನೆ 2 ಕೋಟಿ ರೂಪಾಯಿ. ದೋನಿಯ ದಿನದ ಮಾರುಕಟ್ಟೆ ಮೌಲ್ಯ 1.5 ಕೋಟಿ ರೂಪಾಯಿ. ಮಜಾ ಎಂದರೆ, ವರ್ಷದ ಲೆಕ್ಕಾಚಾರದಲ್ಲಿ ದೋನಿಗೂ ಕೊಹ್ಲಿಗೂ ಅಜಗಜಾಂತರ. ಭಾರತ ವಿಶ್ವಕಪ್ ಗೆಲ್ಲುವ ಮೊದಲು ಹಾಗೂ ನಂತರದ ಎರಡು ಮೂರು ವರ್ಷಗಳಲ್ಲಿ ದೋನಿ ವರ್ಷಕ್ಕೆ ಸರಾಸರಿ 70 ಕೋಟಿ ರೂಪಾಯಿಯಷ್ಟನ್ನು ಬ್ರಾಂಡ್ ಪ್ರಚಾರದ ಮೂಲಕವೇ ಬಾಚಿ ಹಾಕಿದರು.



ಈ ವ್ಯಾಪಾರ ಮರ್ಮವನ್ನು ಇನ್ನಷ್ಟು ಬಿಡಿಸಿ ನೋಡಬೇಕು. ದೋನಿ ಈಗ ಅನುಭವಿ ಆಟಗಾರ. ತಂಡದಲ್ಲಿ ಸ್ಥಾನ ಸ್ಥಿರ. ನಾಯಕತ್ವ ಬಿಟ್ಟರೂ ಅವರ